# ಪ್ರಥಮ ದರ್ಜೆ ದಂಡಾಧಿಕಾರಿಗಳವರ ನ್ಯಾಯಾಲಯ, ಹಳಿಯಾಳ

ಸಿ.ಸಿ . ನಂ 163 /2020

ದೂರುದಾರಃ : ಕರ್ನಾಟಕ ಸರ್ಕಾರ ಇದರ ಪರವಾಗಿ
ಪೋಲಿಸ ಉಪ ನಿರೀಕ್ಷಕರು,
ಹಳಿಯಾಳ ಪೋಲೀಸ್ ಠಾಣೆ, ಹಳಿಯಾಳ .

ವಿರುದ್ಧ

ಆರೋಪಿತರು : ರಾಮದಾಸ ತಂದೆ ಉಳವಪ್ಪ ಮಾದಪ್ಪಗೌಡರ,
ಪ್ರಾಯಃ 35 ವರ್ಷ ಉದ್ಯೋಗಃ ವ್ಯಾಪಾರ
ಸಾಃ ಮಾರುತಿಗಲ್ಲಿ, ಬೆಳವಟಗಿ ಗ್ರಾಮ
ತಾಃ ಹಳಿಯಾಳ, ಜಿಲ್ಲೆ. ಉ.ಕ.

## ದೋಷಾರೋಪಣೆ

ನಾನು, ದೇಶಭೂಷಣ ಕೌಜಲಗಿ. ಬಿ.ಎ.ಎಲ್.ಎಲ್.ಬಿ., ಪ್ರ.ದ.ನ್ಯಾದಂ., ಹಳಿಯಾಳ ಆದ ನಾನು ಈ ಮೂಲಕ ನಿಮ್ಮ ಮೇಲೆ ಮಾಡುವ ದೋಷರೋಪಣೆ ಏನೆಂದರೆ ,

ಆರೋಪಿಯಾದ ನೀವು ದಿನಾಂಕ 21-10-2019 ರಂದು ಸಂಜೆ 05-15 ರ ಸುಮಾರಿಗೆ ಹಳಿಯಾಳ ಪೋಲಿಸ ಠಾಣಾ ಸರಹದ್ದಿನ ಹಾಗೂ ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಬರುವ ಹಳಿಯಾಳ ತಾಲೂಕಿನ ಬೆಳವಟಗಿ ಗ್ರಾಮದ ಮಾರುತಿಗಲ್ಲಿಯ ಸಾರ್ವಜನಿಕ ಸ್ಥಳದಲ್ಲಿ 180 ಎಮ್ ಎಲ್ ನ ಬ್ಯಾಗಪೈಪರ್ ಡಿಲಕ್ಸ ವಿಸ್ಕಿ ಎಂಬ ಲೇಬಲ ಇರುವ ಮದ್ಯ ತುಂಬಿದ 17 ಟೆಟ್ರಾ ಪ್ಯಾಕೇಟಗಳು, 180 ಎಂ.ಎಲ್ ನ ತ್ರೀ ಅಸೆಸ್ ವಿಸ್ಕಿ ಎಂಬ ಲೇಬಲ ಇರುವ ಮದ್ಯ ತುಂಬಿದ 8 ಟೆಟ್ರಾ ಪ್ಯಾಕೇಟಗಳು, 330 ಎಂ.ಎಲ್ ನ ಕಿಂಗಫಿಶರ್ ಸ್ಟ್ರಾಂಗ ಪ್ರಿಮಿಯಮ್ ಬೀಯರ ಎಂಬ ಲೇಬಲ ಇರುವ ಮದ್ಯ ತುಂಬಿದ 6 ಗಾಜಿನ ಬಾಟಲಿಗಳು , 650 ಎಂ.ಎಲ್ ನ ಕಿಂಗಫಿಶರ್ ಸ್ಟ್ರಾಂಗ ಪ್ರಿಮಿಯಮ್ ಬೀಯರ ಎಂಬ ಲೇಬಲ ಇರುವ ಮದ್ಯ ತುಂಬಿದ 3 ಗ್ಲಾಸ ಬಾಟಲಿಗಳು, 180 ಎಮ್ ಎಲ್ ನ ಬ್ಯಾಗಪೈಪರ್ ಡಿಲಕ್ಸ ವಿಸ್ಕಿ ಎಂಬ ಲೇಬಲ ಇರುವ ಅರ್ಧದಷ್ಟು ಮದ್ಯ ತುಂಬಿದ 1 ಟೆಟ್ರಾ ಪ್ಯಾಕೇಟ, ಒಂದು ಪ್ಲಾಸ್ಟಿಕ್ಕ ಕವರದಲ್ಲಿ 59 ಪ್ಲಾಸ್ಟಿಕ್ ಗ್ಲಾಸಗಳು ಹಾಗೂ 2 ಪ್ಲಾಸ್ಟಿಕ್ ಗ್ಲಾಸಗಳು ಖುಲ್ಲಾ ಇದ್ದು ಇವುಗಳೊಂದಿಗೆ ಹಾಗೂ ನಗದು ಹಣ ರೂ .2100/-

ಗಳೊಂದಿಗೆ ಮಾರಾಟ ಮಾಡುವ ಉದ್ದೇಶದಿಂದ ತಾಬಾದಲ್ಲಿಟ್ಟುಕೊಳ್ಳುವ ಮೂಲಕ ನೀವು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 32 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಿರಿ.

ಕೊನೆಯದಾಗಿ ಈ ಮೇಲೆ ಹೇಳಿದ ಅದೇ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀವು ಮೇಲೆ ವಿವರಿಸಿದ ಮಧ್ಯವನ್ನು ಯಾವುದೇ ಪಾಸ್ ಅಥವಾ ಪರ್ಮಿಟ್ ಇಲ್ಲದೇ ಮಾರಾಟ ಮಾಡುವ ಉದ್ದೇಶದಿಂದ ಅನಧಿಕೃತವಾಗಿ ಸಂಗ್ರಹಿಸುವ ಮೂಲಕ ನೀವು ಕರ್ನಾಟಕ ಅಬಕಾರಿ ಕಾಯ್ದೆ **1965** ರ ಕಲಂ **34** ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ.

ಪ್ರಶ್ನೆ 1 : ಈಗ ಓದಿ ಹೇಳಿದ ದೋಷಾರೋಪಣೆಯ ಸಾರಾಂಶ ನಿಮಗೆ ತಿಳಿಯಿತೇ?
ಉತ್ತರ :

ಪ್ರಶ್ನೆ 2 : ಷದ್ರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿಯಾ ಅಥವಾ ವಿಚಾರಣೆಯಾಗಬೇಕೇ?
ಉತ್ತರ :

(ದೋಷಾರೋಪಣೆಯ ಸಾರಾಂಶವನ್ನು ಆರೋಪಿತನಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು)

ಸ್ಥಳ : ಹಳಿಯಾಳ
ದಿನಾಂಕ : 21- 10 -2021 ಪ್ರ.ದ.ನ್ಯಾದಂ. ಹಳಿಯಾಳ